O.S. 61/2024 PW-1

ದಿನಾಂಕಃ 16.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ತುಮಕೂರಿನಲ್ಲಿ ವಾಸವಿದ್ದೇನೆ. ಪ್ರತಿವಾದಿಯು ಯಲದಬಾಗಿ ಗ್ರಾಮದಲ್ಲಿ ವಾಸವಿದ್ದಾರೆ. ಪ್ರತಿವಾದಿಯು ನನಗೆ ಮಧ್ಯವರ್ತಿಗಳ ಮುಖಾಂತರ ಪರಿಚಯ. ದಾವಾ ಸ್ವತ್ತು ಪ್ರತಿವಾದಿಗಳಿಗೆ ಯಾವ ರೀತಿ ಬಂತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಕ್ರಯದ ಬಗ್ಗೆ ಮಾತು ಕತೆಯ ಸಮಯದಲ್ಲಿ ರಮೇಶ್ ಎಂಬುವವರು ಹಾಜರಿದ್ದರು. ದಾವಾ ಸ್ವತ್ತನ್ನು ಕ್ರಯಕ್ಕೆ ಕೊಡುತ್ತೇನೆಂದು ಪ್ರತಿವಾದಿಯು ತಿಳಿಸಿರುತ್ತಾರೆ. ನಿಪಿ.2 ಅನ್ನು ಗೋವಿಂದರಾಜು ಎಂಬುವವರು ಬರೆದಿರುತ್ತಾರೆ. ಪ್ರತಿವಾದಿಗಳ ವೈಯುಕ್ತಿಕ ಸಮಸ್ಯೆಯಿಂದ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ರುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ರಲಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಂತೆ ನಾನು ಯಾವುದೇ ಮುಂಗಡ ಹಣವನ್ನು ಪ್ರತಿವಾದಿಗೆ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಮೋಸ ಮಾಡಿ ನಿಪಿ.2 ಅನ್ನು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.